ಅರಣ್ಯ ಭೂಮಿಯ ಒತ್ತುವರಿ

೧೪೮೫. ಶ್ರೀ ಕೆ. ಹೆಚ್. ಪಾಟೀಲ್ (ಗದಗ).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯಭೂಮಿಯ ಅತಿಕ್ರಮಣ ಮಾಡುತ್ತಿರುವುದು ನಿಜವೆ?

ಆ) ಹಾಗಾದರೆ ಒಟ್ಟು ಅತಿಕ್ರಮಣ ಮಾಡಿದ ಪ್ರದೇಶವೆಷ್ಟು ಮತ್ತು ಎಷ್ಟು ಜನರಿಂದ ಅತಿಕ್ರಮಣ ನಡೆದಿರುತ್ತೆ.

ಶ್ರೀ ಜೆ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹಿಂದೆ ಕೆಲವು ಅತಿಕ್ರಮಣ ಪ್ರಕರಣಗಳು ಆಗಿವೆ. ಈಗ ಇಲ್ಲ.

ಆ) ಒಟ್ಟು ಅತಿಕ್ರಮಿಸಿದ ಅರಣ್ಯಜಮೀನು. : ೬೭೭೬.೭೯ ಹೆ.

೧. ಅತಿಕ್ರಮಣ ಮಾಡಿದ ಜನರುಸಂಖ್ಯೆ. : ೧೧೪೬೦

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಶ್ರೀ ಕೆ. ಎಚ್. ಪಾಟೀಲ್ ಪರವಾಗಿ).— ಇಲ್ಲಿ (ಅ) ಪ್ರಶ್ನೆಗೆ ಉತ್ತರವಾಗಿ ಹಿಂದೆ ಕೆಲವು ಅತಿಕ್ರಮಣ ಪ್ರಕರಣಗಳು ಆಗಿವೆ ಎಂದು ಹೇಳಿದ್ದಾರೆ. ಹೀಗೆ ಒಟ್ಟು ಅತ್ರಿಕಮಿಸಿದ ಅರಣ್ಯ ಪ್ರದೇಶ ೬೭೭೬ ಹೆಕ್ಟಾರ್‌ನಷ್ಟು ಆಗಿದೆ ಎಂದೂ ಸಹ ಇಲ್ಲಿ ಹೇಳಿದ್ದಾರೆ. ಈಗ ತವುಗೆಲ್ಲಾ ತಿಳಿದಿರುವಂತೆ ರಾಜ್ಯದ ಕೆಲವು ಕಡೆಗಳಲ್ಲಿ ಸಿ ಮತ್ತು ಡಿ ಕ್ಲಾಸ್ ಲ್ಯಾಂಡ್ಸ್ ಏನಿದೆ, ಅಲ್ಲಿ ಅರಣ್ಯ ಬೆಳೆಸುವ ಸಲುವಾಗಿ ರೆವಿನ್ಯೂ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ. ಈ ರೀತಿ ವರ್ಗಾವಣೆ ಮಾಡುವಾಗ ಆ ಜಮೀನುಗಳಲ್ಲಿ ಯಾರುಯಾರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದರು, ಅಂತಹ ಜಮೀನನ್ನು ಅವರವರ ಹೆಸರಿಗೆ ಖಾಯಂ ಮಾಡಬೇಕಾಗಿತ್ತು,

೧೨-೦೦ ಮಧ್ಯಾಹ್ನ.

ಆದರೆ ರಿಕಾರ್ಡನ್ನು ಹ್ಯಾಂಡ್ ಓವರ್ ಮಾಡುವಾಗ ಇಲ್ಲಿ ಸರ್ವೆ ನಂಬರ್ ಕೊಡುವಾಗ ಅನ್‌ಆಥರೈಸ್ಡ್ ಕಲ್ಟಿವೇಟರ್ಸ್‌ಗೆ ತೊಂದರೆ ಆಗಿದೆ, ಇಂತಹ ಲ್ಯಾಂಡ್‌ಗಳನ್ನು ರೆಗ್ಯುಲರೈಸ್ ಮಾಡುತ್ತಿರೋ ಹೇಗೆ ? ಅಥವಾ ಯಾರು ಯಾರು ಪೊಸಿಷನ್‌ನಲ್ಲಿದ್ದಾರೋ ಅದನ್ನು ತೆಗೆದುಕೊಂಡು ಮತ್ತೆ ಏನಾದರೂ ಅವರಿಗೆ ವ್ಯವಸ್ಥೆ ಮಾಡುತ್ತಿರೊ? ಸರ್ಪ್ಲಸ್ ಲ್ಯಾಂಡ್ ಆಗಲಿ, ಬೇರೆ ಜಮೀನಾಗಲಿ ಕೊಡತಕ್ಕ ವ್ಯವಸ್ಥೆ ಮಾಡುತ್ತೀರೋ ? ಎರಡನೆಯದು ಅತಿಕ್ರಮಣ ಮಾಡಿದ ಜನ ಸಂಖ್ಯೆ ೧೧೪೬೦ ಎಂದು ಹೇಳಿದಿರಿ. ಇಂತಹ ಪ್ರಕರಣಗಳಲ್ಲಿ ಇವರ ಮೇಲೆ ಯಾವ ಕ್ರಮತೆಗೆದುಕೊಳ್ಳುತ್ತೀರಿ, ಇಲ್ಲಾ ಅವರಿಗೆ ಕನ್‌ಫರ್ಮ್ ಮಾಡುತ್ತೀರಾ ಹೇಗೆ ?

ಶ್ರೀ ಜೆ. ಎಸ್. ಬಾಗಲಕೋಟೆ.—ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಬರುವಂಥ ೬೭೭೬.೭೯ ಹೆಕ್ಟೇರ್ ಜಮೀನು ಸಿ ಅಂಡ್ ಡಿ ಕ್ಲಾಸ್‌ಗೆ ಸಂಬಂಧಿಸಿಲ್ಲ, ಇದು ಅರಣ್ಯ ಇಲಾಖೆಗೆ ಸಂಬಂಧಿಸಿದ ಜಮೀನು. ಈ ಜಮೀನು ೧೯೭೮ಕ್ಕಿಂತ ಪೂರ್ವದಲ್ಲಿ ಅತಿಕ್ರಮಣ ಆಗಿದ್ದರೆ ಆ ಬಗ್ಗೆ ಅದನ್ನ ಸಕ್ರಮಗೊಳಿಸಲಿಕ್ಕೆ ಅವಶ್ಯಕವಾದಂಥ ಕೇಂದ್ರಸರ್ಕಾರದ ಪರವಾನಿಗಿ ಪಡೆಯಲು ನಾವು ಪ್ರಯತ್ನ ಮಾಡುತ್ತೇವೆ. ಮೂರನೆಯದಾಗಿ ಸಿ ಅಂಡ್ ಡಿ ಕ್ಲಾಸ್ ಜಮೀನು ಸಲುವಾಗಿ ಕೇಳಿದ್ದಾರೆ. ಅದರ ಬಗ್ಗೆ ಪ್ರತ್ಯೇಕವಾದಂಥ ಪ್ರಶ್ನೆ ಕಳುಹಿಸಿದರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ೧೯೭೮ಕ್ಕಿಂತ ಹಿಂದೆ ಯಾರು ಕಲ್ಟಿವೇಟ್ ಮಾಡುತ್ತಿದ್ದರೋ ಅದನ್ನು ರೆಗ್ಯುಲರೈಸ್ ಮಾಡುತ್ತೇವೆ ಎಂಬ ಒಂದು ಸರ್ಕ್ಯುಲರ್ ಇದೆ. ಇನ್ನೊಂದು ೧೯೮೧ರಲ್ಲಿ ಕೂಡ ಒಂದು ಸರ್ಕ್ಯುಲರ್ ತೆಗೆದು ಯಾರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಕೇವಲ ಒಂದು ವರ್ಷ ಕಲ್ಟಿವೇಟ್ ಮಾಡಿದರೆ ಅಂಥವರಿಗೂ ಕೂಡ ರೆಗ್ಯುಲರೈಸ್ ಮಾಡಬೇಕು ಎಂಬ ಆದೇಶವನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್ ಕೊಟ್ಟಿತ್ತು. ಇದರ ಬಗ್ಗೆ ಚೀಫ್ ಸೆಕ್ರೆಟರಿ, ರೆವಿನ್ಯೂ ಕಮಿಷನರ್ ಮತ್ತು ಡೆವಲಪ್‌ಮೆಂಟ್ ಕಮಿಷನರ್ ಈ ಜನರೂ ಸೇರಿ ಒಂದು ಮೀಟಿಂಗ್‌ಮಾಡಿ ಇಂತಹ ಲ್ಯಾಂಡ್ಸ್ ಇದ್ದರೆ ಅವರಿಗೇ ಬಿಟ್ಟು ಕೊಡಬೇಕು ಎಂದು ಪ್ರೊಸೀಡಿಂಗ್ಸ್ ಆಗಿತ್ತು. ಅದರ ಮೇರೆಗೆ ಸ್ಪೆಷಲ್ ಡೆಪ್ಯೂಟಿ ಕಮಿಷನರಿಗೆ ಆದೇಶಕೊಟ್ಟು ರೆಗ್ಯುಲರೈಸ್ ಮಾಡಿ

ಎಂದು ಹೇಳಿದರು, ಇದಾದಮೇಲೆ ಸಿ ಅಂಡ್ ಡಿ ಕ್ಲಾಸ್ ಲ್ಯಾಂಡ್ಸ್ ಎಲ್ಲಾ ಸೇರಿಸಿಬಿಟ್ಟಿ ಅಂತಿರಿ ಎಲ್ಲಾ ಲ್ಯಾಂಡನ್ನು ಫಾರೆಸ್ಟ್‌ಗೆ ಸೇರಿಸಿದರು, ಈ ರೀತಿ ಸೇರಿದಮೇಲೆ ಪೊದಲು ಕಲ್ಟಿವೇಟ್ ಮಾಡು ತ್ತಿದ್ದವರಿಗೆ ರೆಗ್ಯುಲರೈಸ್ ಮಾಡಿ ಕೊಡುವುದನ್ನು ಬಿಟ್ಟು ದರಖಾಸ್ತ್ ಕೊಟ್ಟಿಲ್ಲ. ಕೊಟ್ಟವರದು ಆಗಿದೆ, ನಮಗೆ ಮಾತ್ರ ಆಗಿಲ್ಲ ಎಂದು ಹೇಳುತ್ತಾರೆ, ಇವನ್ನು ಹೇಗೆ ಮಾಡುತ್ತೀರಿ ? ಸಿ ಅಂಡ್ ಡಿ ಕ್ಲಾಸ್ ಲ್ಯಾಂಡ್ ಕಲ್ಟಿವೇಟ್ ಮಾಡುತ್ತಿದ್ದ ಕಲ್ಟಿವೇಟರ್ಸ್‌ನಲ್ಲಿ ಕೆಲವು ಜನರಿಗೆ ರೆಗ್ಯುಲರೈಸ್ ಆಗಿಲ್ಲ. ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಈ ಕಮಿಟಿಮಾಡಿ ಅಂತಹವರದನ್ನೂ ಕನ್ಸಿಡರ್ ಮಾಡಬೇಕು ಎಂದು ಆದೇಶ ಕೊಟ್ಟಿತ್ತು. ಆ ಪ್ರಕಾರ ರೆಗ್ಯುಲರೈಸ್ ಮಾಡಿಕೊಡುತ್ತೀರಾ ? ೧೦-೨೦ ವರ್ಷ ಗಳಿಂದ ಕಲ್ಟಿವೇಟ್ ಮಾಡುತ್ತಾ ಬಂದಿದ್ದಾರೆ. ಅವರಿಗೆ ಏನಾದರೂ ಬೇರೆ ವ್ಯವಸ್ಥೆ ಮಾಡುತ್ತೀರೋ ಹೇಗೆ ?

ಶ್ರೀ ಜಿ. ಎಸ್. ಬಾಗಲಕೋಟೆ.—೧೯೭೧ರಲ್ಲಿ ಆದಂಥ ಆದೇಶ ನನ್ನ ಬಳಿ ಇಲ್ಲ ಸಿ ಅಂಡ್ ಡಿ ಕ್ಲಾಸಿನ ಜಮೀನು ಸಲುವಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಪ್ರಶ್ನೆ ಉದ್ಭವಿಸುವುದೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿರುವ ಪ್ರಶ್ನೆ, ಅತಿಕ್ರಮಣದ ಪ್ರದೇಶದಲ್ಲಿ ವಿಶೇಷವಾಗಿ ಭೂರಹಿತ ಬಡ ಕಾರ್ಮಿಕರು, ಬೇರೆ ಜೀವನೋಪಾಯವಿಲ್ಲದಂಥ ಜನರು ೧೯೮೦ಕ್ಕಿಂತ ಪೊದಲು ಅತಿಕ್ರಮಣ ಮಾಡಿದ್ದರೆ ಅವರಿಗೆ ಅವರ ಜಮೀನನ್ನು ಸಕ್ರಮಗೊಳಿಸುವುದು ಸರ್ಕಾರದ ಉದ್ದೇಶ. ಒಂದುವೇಳೆ ಅವರಲ್ಲಿ ಅದಕ್ಕೆ ಆಧಾರ ಇಲ್ಲದೇ ಹೋದಲ್ಲಿ ಅಂತಹವರ ಸಲುವಾಗಿ ಒಂದು ಕಮಿಟಿಮಾಡಿ, ೫ ಜನ ಸದಸ್ಯರ ಒಂದು ತಾಲ್ಲೂಕು ಕಮಿಟಿ ಮಾಡಿ ಆ ಕಮಿಟಿ ಮುಖಾಂತರ ಒಂದು ವರದಿಯನ್ನು ಪಡೆದು ಎಲ್ಲಾ ವರದಿಗಳ ವಿವರವನ್ನು ಒಂದೆಡೆ ಸೇರಿಸಿ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಪ್ರಕಾರ ಅವರ ಪರವಾಗಿ ಪಡೆದು ಅವನ್ನು ಸಕ್ರಮಗೊಳಿಸುವಂಥ ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ. ಇನ್ನು ರೆವಿನ್ಯೂ ಇಲಾಖೆಗೆ ಸಂಬಂಧಿಸಿದ ಅತಿಕ್ರಮ ಮಾಡಿದ ಜಮೀನುಗಳನ್ನು ಕೊಡುವಾಗ ಕೆಲಸ ರೆವಿನ್ಯೂ ಇಲಾಖೆಯವರು ಮಾಡುತ್ತಾರೆ. ಆ ಬಗ್ಗೆ ಸನ್ಮಾನ್ಯ ಹಿರಿಯ ಸದಸ್ಯರು ಬೇರೆ ಪ್ರಶ್ನೆ ಕೇಳಬೇಕು.

ಶ್ರೀ ಪಿ.ಎಸ್. ರಾಣೆ.—೧೯೮೦ರ ಪೂರ್ವದಲ್ಲಿ ಅತಿಕ್ರಮಣ ಮಾಡಿದಂಥ ಅರಣ್ಯ ಭೂಮಿಯನ್ನು ಸಕ್ರಮಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ ಕೆಲವು ಭಾಗದಲ್ಲಿ ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿದ್ದರೂ ಯಾವುದೇ ರೀತಿಯ ಆಧಾರಗಳು ಇಲ್ಲವೆಂದು ಹೇಳಿದ್ದೀರಿ. ಈ ವಿಚಾರದಲ್ಲಿ ತಾಲ್ಲೂಕು ಸಮಿತಿಗಳನ್ನು ರಚನೆ ಮಾಡಿದ್ದು, ಅವುಗಳಿಂದ ವರದಿಗಳನ್ನು ತರಿಸಿ ಕೊಳ್ಳುತ್ತೇವೆಂದು ಹೇಳಿದ್ದೀರಿ. ಯಾವ ಯಾವ ತಾಲ್ಲೂಕಿನ ವರದಿಗಳನ್ನು ತರಿಸಿಕೊಂಡಿದ್ದೀರಿ. ಬಂದಂತ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಿರಾ ? ಅತಿಕ್ರಮಣ ಜಮೀನುಗಳನ್ನು ಸಕ್ರಮ ಗೊಳಿಸಲು ಸರ್ಕಾರದವರು ಕೈಗೊಂಡಂಥ ನಿರ್ದಿಷ್ಟವಾದ ಕ್ರಮಗಳು ಯಾವುವು ? ಕೇಂದ್ರಸರ್ಕಾರಕ್ಕೆ ಯಾವಾಗ ಶಿಫಾರಸ್ಸುನ್ನು ಕಳುಹಿಸಿಕೊಡುತ್ತೀರಾ ?

ಶ್ರೀ ಜಿ. ಎಸ್. ಬಾಗಲಕೋಟೆ.—ಈಗಾಗಲೆ, ಅತಿಕ್ರಮಣವಾದಂಥ ಅರಣ್ಯ ಭೂಮಿಯನ್ನು ಸಕ್ರಮಗೊಳಿಸುವುದಕ್ಕೆ ಅರಣ್ಯ ಇಲಾಖೆಯವರು ವಿಶಿಷ್ಟವಾದ ಕ್ರಮವನ್ನು ಕೈಗೊಂಡಿದ್ದಾರೆ. ೧೯೮೦ಕ್ಕೂ ಪೊದಲು, ಯಾರು ಅತಿಕ್ರಮಣ ಮಾಡಿದ್ದರೂ, ಅಂತವರು ಭೂಹೀನರಾಗಿದ್ದರೆ, ಬಡ ಕಾರ್ಮಿಕರಿದ್ದರೆ, ತೀರಾ ಬಡವರಿದ್ದರೆ, ಅಂತಹವರನ್ನು ಒಕ್ಕಲೆಬ್ಬಿಸುವುದಿಲ್ಲ. ತಾಲ್ಲೂಕು ಸಮಿತಿ ಗಳನ್ನು ಈಗಾಗಲೇ ದಕ್ಷಿಣ ಕನ್ನಡ ಉತ್ತರ ಕನ್ನಡ ಕೊಡಗು. ಹಾಗೂ ಕೋಲಾರ ಜಿಲ್ಲೆಗಳಲ್ಲಿ ಮಾಡಲಾಗಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—೧೯೮೦ರಲ್ಲಿ ಹೇಳಿದರೂ, ಇದುವರೆಗೂ ಕಮಿಟಿಗಳನ್ನು ಮಾಡಿಲ್ಲ.

ಶ್ರೀ ಜಿ ಎಸ್. ಬಾಗಲಕೋಟ್.—ಅಧ್ಯಕ್ಷರೆ, ಮಾನ್ಯ ಸದಸ್ಯರು, ಸಮಾಧಾನದಿಂದ ಕೇಳಿದರೆ ಅವರಿಗೆ ವಿಷಯ ಗೊತ್ತಾಗುತ್ತದೆ, ೧೯೮೦ರ ಪೂರ್ವದಲ್ಲಿ ಅತಿಕ್ರಮಣ ಮಾಡಿದಂಥ ಜಮೀನನ್ನು ಸಕ್ರಮಗೊಳಿಸುವ ಸಲುವಾಗಿ, ಈಗಾಗಲೆ ೪ ಜಿಲ್ಲೆಗಳಲ್ಲಿ ತಾಲ್ಲೂಕು ಸಮಿತಿಗಳನ್ನು ರಚಿಸುವ ಸಲುವಾಗಿ, ಅರಣ್ಯ ಇಲಾಖೆಯವರು ಕ್ರಮ ಕೈಗೊಂಡಿದ್ದಾರೆ. ಸರ್ಕಾರದ ಆಜ್ಞೆ ಕೆಲವೇ ದಿವಸದಲ್ಲಿ ಹೊರಡಲಿದ್ದು ಸಮಿತಿಗಳಂ ಕೆಲಸ ಮಾಡುತ್ತವೆ.

(ನಾಲ್ಕು ಜನ ಸದಸ್ಯರು ಎದು ನಿಂತು ಒಟ್ಟಿಗೆ ಮಾತನಾಡಿದರಂ)

ಅಧ್ಯಕ್ಷರು.—ನೀವು ಹೇಳಿದುದ್ದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಹೀಗೆ ಎಲ್ಲರೂ ಒಟ್ಟಿಗೆ ನಿಂತಂ ಮಾತನಾಡುವುದಂ ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶಿ ಜನರಿರುವ ತಾಲ್ಲೂಕು ಸಮಿತಿಯನ್ನು ಮಾಡಿ, ಆ ವಲಯಲಕ ಜವಿೀನನ್ನು ಹಂಚಿಕೆ ಮಾಡುತ್ತೇವೆಂದಂ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಮಾನ್ಯ ಸದಸ್ಯರಂಗಳು ಇದುವರೆಗೂ ಸಮಿತಿಗಳನ್ನೇ ಮಾಡಿಲ್ಲ ಎನ್ನುವ ವಾದವನ್ನು ಇಟ್ಟಿದ್ದಾರೆ. ಶಿರಸಿ ತಾಲ್ಲೂಕಿನಲ್ಲಿ ತಾಲ್ಲೂಕು ಸಮಿತಿಯನ್ನು ರಚನೆ ಮಾಡಲಾಗಿದೆಯೇ ? ಅದರಲ್ಲಿ ಯಾರು ಯಾರು ಇದ್ದಾರೆ ?

ಅಧ್ಯಕ್ಷರು —ಸಮಿತಿಗಳನ್ನು ಮಾಡಿಲ್ಲವೆಂದು ಸದಸ್ಯರುಗಳು ಹೇಳುತ್ತಿದ್ದಾರೆ.

ಶ್ರೀ ಜಿ. ಎಸ್. ಬಾಗಲಕೋಟೆ.—ಅಧ್ಯಕ್ಷರೇ, ಜಿಲ್ಲೆಯ ಡಿ.ಸಿ.ಯವರು ಅಧ್ಯಕ್ಷರಾಗಿರಂತ್ತಾರೆ. ಅಲ್ಲಿನ ಶಾಸಕರು, ಸದಸ್ಯರಾಗಿರುತ್ತಾರೆ. ಇನ್ನೊಬ್ಬರು ಅಧಿಕಾರೇತರ ಸದಸ್ಯರು ಇರುತ್ತಾರೆ. ತಹಶೀಲ್ದಾರರು, ಮತ್ತು ಅಸಿಸ್ಟೆಂಟ್ ಕಮೀಷನರ್‌ರವರು ಕಾರ್ಯದರ್ಶಿಗಳಾಗಿರುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—೧೯೮೫ರಿಂದ ಇದುವರೆಗೆ ಒಂದು ಕಮಿಟಿ ಸಭೆಯನ್ನು ಕರೆದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಬ್ಬರು ಅಧಿಕಾರೇತರ ಸದಸ್ಯರು ಎಂದು ಹೇಳಿದರು, ಅವರು ಯಾರು ?

ಅಧ್ಯಕ್ಷರು.—ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿರುವ ಬಗ್ಗೆ ಎಂದು ಪ್ರಶ್ನೆ ಇದೆ. ಇಲ್ಲಿ ಸಿರ್ಸಿ ತಾಲ್ಲೂಕು ವಿಚಾರ ಬರುವುದಿಲ್ಲ. ನಿಮ್ಮ ತಾಲ್ಲೂಕಿನಲ್ಲಿ ಮಾಡಿಲ್ಲ ಎಂದರೆ ಶಾರ್ಟ್ ನೋಟೀಸ್ ಪ್ರಶ್ನೆಯನ್ನು ಕಳುಹಿಸಿಕೊಡಿ. ಈಗ ಮಾನ್ಯ ಬೆಲ್ಲದ್ ಅವರೇ, ತಾವು ಪ್ರಶ್ನೆ ಕೇಳಿ.

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಸಮಿತಿ ಮಾಡದೆ ಮಾಡಿದ್ದೇವೆ ಎಂದರೆ ಅದು ಸಭೆಯನ್ನು ಮಿಸ್‌ಲೀಡ್ ಮಾಡಿದಂತೆ ಆಗುವುದಿಲ್ಲವೆ ?

ಅಧ್ಯಕ್ಷರು.—ಅದು ಮಿಸ್‌ಲೀಡಿಂಗ್ ದಿ ಹೌಸ್ ಆಗಂವುದಿಲ್ಲ. ಡೈರೆಕ್ಷನ್ ಕೊಟ್ಟಿರಂತ್ತಾರೆ.

(ಶ್ರೀ ರಾಣೆ, ಆಡ್ಯಂತಾಯ, ಆರ್. ಎನ್. ನಾಯಕ್, ಮತ್ತು ಜಿ. ಎಂ. ಕಾನಡೆಯವರು ಒಟ್ಟಿಗೆ ಎದ್ದುನಿಂತು ಮಾತನಾಡತೊಡಗಿದರು.)

ಅಧ್ಯಕ್ಷರು.—ಈಗ ಕೊಶ್ಚನ್ ಅವರ್ ಮುಗಿದಿದೆ. ಆದರೂ ಉಳಿದ ಪ್ರಶ್ನೆಗಳು ಲ್ಯಾಪ್ಸ್ ಆಗಬಾರದು ಎಂಬ ದೃಷ್ಟಿಯಿಂದ ಅವಕಾಶ ಕೊಟ್ಟಿದ್ದೇನೆ. ಕೆ. ಎಚ್. ಪಾಟೀಲರ ಪರವಾಗಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಟ್ಟಿದೆ. ನೀವು ರೂಲ್ಸ್ ರೆಗ್ಯುಲೇಷನ್ಸ್ ಸ್ವಲ್ಪ ತಿಳಿದುಕೊಳ್ಳಬೇಕು.

(ಶ್ರೀ ಜಿ. ಎಂ. ಕಾನಡೆ, ಆರ್. ಎನ್. ನಾಯಕ್. ರಾಣೆಯವರು ಮತ್ತೆ ಒಟ್ಟಿಗೆ ಎದ್ದು ಮಾತನಾಡತೊಡಗಿದರು. ಮಾತುಗಳು ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ.)

ಅಧ್ಯಕ್ಷರು.—ನಿಮ್ಮದು ದಿವಸ ಇದೊಂದು ಪದ್ಧತಿಯೇ ? ಐದಾರು ಮಂದಿ ಎದ್ದುನಿಂತು ಗಲಾಟೆ ಮಾಡುವುದು ?

ಶ್ರೀ ಡಿ. ಟಿ. ಜಯಕುಮಾರ್.—ಅಧ್ಯಕ್ಷರೇ, ಇದೇನು ಕೊಶ್ಚನ್ ಅವರೋ ಏನೋ ?

ಅಧ್ಯಕ್ಷರು.—ನೀವು ನಾಲ್ಕು ಜನ ಕುಳಿತುಕೊಳ್ಳೀರೋ ಇಲ್ಲವೋ ಹೇಳಿ ? ಎದ್ದು ಈ ರೀತಿ ಮಾಡಿದರೆ ನಾನು ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ತಾವುಗಳು ಬೇಕಾದರೆ ಇದಕ್ಕೆ ಶಾರ್ಟ್ ನೋಟೀಸ್ ಕೊಶ್ಚನ್ ಕಳಿಸಿಕೊಡಿ.

ಶ್ರೀ ಜಿ. ಎಂ. ಕಾನಡೆ.—ನೀವು ಯಾವಾಗ ಅವಕಾಶ ಕೊಟ್ಟಿದ್ದೀರಿ ?

(ಗೊಂದಲ)

ಶ್ರೀ ಜಿ ಎಂ. ಕಾನಡೆ.—೧೫ ಕೊಶ್ಚನ್ ನಾನು ಕಳುಹಿಸಿಕೊಟ್ಟಿದ್ದೆ. ಅದಕ್ಕೆ ಯಾವಾಗ ಅವಕಾಶ ಕೊಟ್ಟಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನಾವು ಕೇಳುವುದಿಷ್ಟೆ. ತಾಲ್ಲೂಕಿಂ ಮಟ್ಟದ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೀವೆ, ಅವರು ಅ್ಯಾಂಡ್ ಗ್ರಾಂಟ್ ಮಾಡುತ್ತಾರೆ ಎಂದು ಹೇಳಿದರು. ನನ್ನ ಪ್ರಶ್ನೆ ಮೂಲಭೂತವಾಗಿ ತಾಲ್ಲೂಕು ಮಟ್ಟದ ಕಮಿಟಿಗಳೇ ಆಗಿಲ್ಲ ಎನ್ನುವುದು. ಎರಡು ವರ್ಷದಿಂದ ಇದನ್ನು ಹೇಳುತ್ತಿದ್ದಾರೆ. ಒಂದಾದರೂ ಮಾಡಿದ್ದುದು ಉದಾಹರಣೆ ಕೊಡಲಿ ಅವರು. ಕಮಿಟಿಯಲ್ಲಿ ಯಾರಿದ್ದಾರೆ ಎಂದರೆ ಅವರಿರುತ್ತಾರೆ, ಇವರಿರುತ್ತಾರೆ ಎಂದು ಫಾರ್ಮುಲಾ ಹೇಳುತ್ತಾರೆ. ಅದಂ ಎಲ್ಲರಿಗೂ ಗೊತ್ತಿದೆ.

(ಶ್ರೀ ಆಡ್ಯಂತಾಯ ಅವರು ಮಧ್ಯೆ ಮಾತನಾಡಲು ಎದ್ದು ನಿಂತರು.)

ಅಧ್ಯಕ್ಷರು.—ನಿಮಗೆ ನಿಮ್ಮ ಲೀಡರ್ ಬಗ್ಗೆಯೂ ಗೌರವ ಇಲ್ಲ, ಸದನದ ಬಗ್ಗೆಯೂ ಗೌರವ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಮಿಟಿ ಕಾನ್‌ಸ್ಟಿಟ್ಯೂಟ್ ಆಗದೆ, ಆಗಿದೆ ಎಂದು ಸದನದಲ್ಲಿ ಹೇಳುತ್ತಾ ಇದ್ದಾರೆ. ಯಾವ ಆಧಾರದ ಮೇಲೆ ಹೇಳುತ್ತಾರೆ? ಇದನ್ನು ಕೇಳುವುದಕ್ಕೆ ಶಾರ್ಟ್ ನೋಟೀಸ್ ಕೊಶ್ಚನ್ ವಿತಕ್ಕೆ ಕೇಳಬೇಕು? ಕಮಿಟಿ ಮಾಡಿದ್ದರೆ ಮಾಡಿದೆ ಎಂದು ಹೇಳಲಿ, ಮಾಡದಿದ್ದರೆ ಮಾಡಿಲ್ಲ ಎಂದು ಹೇಳಲಿ.

ಶ್ರೀ ಜೆ. ಎಚ್. ಪಟೇಲ್.—ಕಾಂಪೊಸಿಷನ್ ಆಫ್ ದಿ ಕಮಿಟಿ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೆಸರು ಹೇಳಲಿ ಸದಸ್ಯರದು. ಹೆಸರು ಹೇಳದಿದ್ದರೆ ಅದರ ಅರ್ಥ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿಲ್ಲ ಎಂದೂ. ಅಸಿಸ್ಟೆಂಟ್ ಕಮಿಷನರ್ ಇದ್ದಾರೆ ಅವರಿದ್ದಾರೆ, ಇವರಿದ್ದಾರೆ ಅಂದರೆ ನಾವಿಂನೇಟೆಡ್ ಮೆಂಬರ್ಸ್ ಯಾರು ಹೇಳಬೇಕು? ನನ್ನ ಪ್ರಕಾರ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿಲ್ಲ.

ಅಧ್ಯಕ್ಷರು.—ಕಮಿಟಿ ಕಾನ್‌ಸ್ಟಿಟ್ಯೂಟ್ ಆಕ್ಟ್‌ಯಂಲ್ಲಾಗಿ ಆಗಿಲ್ಲ. ಗೌರ್ನಮೆಂಟ್ ಆರ್ಡರ್ ಆಗಿದೆ ಎಂದು ಹೇಳುತ್ತಿದ್ದಾರೆ.

ಶ್ರೀ ಜಿ. ಎಸ್. ಬಾಗಲಕೋಟಿ.—ಸನ್ಮಾನ್ಯ ಅಧ್ಯಕ್ಷರೇ, ದಯವಿಟ್ಟು ಆ ಕಡೆ ಸದಸ್ಯರು ಸ್ವಲ್ಪ ಅವಕಾಶವನ್ನು ಕೊಟ್ಟರೆ ಅವರಿಗೆ ಎಲ್ಲಾ ವಿಷಯವನ್ನೂ ಹೇಳುತ್ತೇನೆ. ಅವರಿಗೆ ಖಾತ್ರಿಯಾಗುವ ಹಾಗೆ ಹೇಳುತ್ತೇನೆ. ಅವರು ಯಾವುದೇ ಉದ್ವೇಗಕ್ಕೆ ಒಳಪಡುವ ಕಾರಣ ಇಲ್ಲ.

ಅಧ್ಯಕ್ಷರು.—ಎಲ್ಲರೂ ಶಾಂತಿ, ಸಮಾಧಾನ, ಶಿಸ್ತನ್ನು ಅನುಸರಿಸಿ,

ಶ್ರೀ ಜಿ. ಎಸ್. ಬಾಗಲಕೋಟಿ.—ನಾನು ಹೇಳಿದ್ದುದು ದಕ್ಷಿಣ ಕನ್ನಡ, ಉತ್ತರ ಕನ್ನಡ ಕೊಡಗು ವಂಠ್ಯ ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ತಾಲ್ಲೂಕು ಕಮಿಟಿಗಳನ್ನು ಮಾಡುವ ದೃಷ್ಟಿಯಿಂದ ಅರಣ್ಯ ಇಲಾಖೆ ಈಗಾಗಲೇ ನಿರ್ಧಾರ ತೆಗೆದುಕೊಂಡು ಅದನ್ನು ಸರ್ಕಾರಕ್ಕೆ ಕಳುಹಿಸಿದೆ. ಸರ್ಕಾರದಿಂದ ಕಮಿಟಿ ಜಾಹೀರಾಗಬೇಕು. ಅದು ಆಗುವವರೆಗೂ ಅವರು ತಡೆಯಬೇಕು. ಇದಷ್ಟೇ ನಾನು ಹೇಳಿದ್ದುದು.

ಅಧ್ಯಕ್ಷರು.—ಅದಷ್ಟು ಜಾಗ್ರತೆ ಮಾಡುತ್ತಾರೆ.

ಶ್ರೀ ಜಿ. ಎಸ್. ಬಾಗಲಕೋಟಿ.—ಅದಷ್ಟು ಶೀಘ್ರದಲ್ಲೇ ಮಾಡುತ್ತೇವೆ.

ಶ್ರೀ ಆರ್. ಎನ್. ನಾಯಕ್.—ಸದನವನ್ನು ತಪ್ಪುದಾರಿಗೆ ಎಳೆದಿದ್ದಾರೆ. ಅವರಿಗೆ ಛೀಮಾರಿ ಹಾಕಿ.

(ಗೊಂದಲ)

ಅಧ್ಯಕ್ಷರು.—ಅದಷ್ಟು ಬೇಗ ಮಾಡುತ್ತೇನೆಂದು ಹೇಳುತ್ತಿದ್ದಾರೆ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಅದಷ್ಟು ಬೇಗ ಮಾಡಿಸಿಕೊಡುತ್ತೇನೆ.

(ಗೊಂದಲ)

ಶ್ರೀ ಪಿ. ಎಸ್. ರಾಣೆ.—ಮಾನ್ಯ ಸಚಿವರು ಅರಣ್ಯ ಇಲಾಖೆಯವರು ಕಳುಹಿಸಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಎಷ್ಟು ವರ್ಷದ ಹಿಂದೆ ಅವರು. ಕಳುಹಿಸಿಕೊಟ್ಟಿದ್ದಾರೆ. ಅದನ್ನು ನೀವು ಯಾವ ವರ್ಷದಲ್ಲಿ ಅಪ್ರೂವ್ ಮಾಡುತ್ತೀರಿ ?

ಅಧ್ಯಕ್ಷರು.—ಅರ್ಧ ಗಂಟೆ ಚರ್ಚೆಗೆ ಕಳುಹಿಸಿಕೊಡಿ. ಅವಕಾಶ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳುವುದನ್ನು ಕಲಿಯಿರಿ.

(ಗೊಂದಲ)

ಅಧ್ಯಕ್ಷರು.—ನೀವು ಹೇಳಿದ್ದನ್ನೆಲ್ಲಾ ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಹತ್ತಿರ ಏನು ಲಿಸ್ಟ್ ಬಂದಿದೆ-(ಕೋಲಾರ, ಉತ್ತರಕನ್ನಡ ಮತ್ತು ಧಾರವಾಡ ಎಂದು ೩-೪ ಜಿಲ್ಲೆಗಳ ಹೆಸರುಗಳನ್ನು ಹೇಳಿದರು) ಅದನ್ನು ವಾರದೊಳಗೆ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿ ಕಳುಹಿಸಿಕೊಡುತ್ತಾರೆಯೆ ?

ಅಧ್ಯಕ್ಷರು.—ಆಯಿತು. ಒಂದು ವಾರದೊಳಗೆ ಮಾಡಿ ಕಳುಹಿಸಿಕೊಡಿ.

ಶ್ರೀ ಜೆ. ಎಸ್. ಬಾಗಲಕೋಟೆ.—ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಆದಷ್ಟು ಶೀಘ್ರವಾಗಿ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿ ಕಳುಹಿಸಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ಅಡ್ಯಂತಾಯರವರೇ ತಾವು ಈ ರೀತಿ ಮಾಡಿದರೆ ನಾನು ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ಅರ್ಧ ಗಂಟೆ ಚರ್ಚೆಗೆ ನೋಟೀಸ್ ಕಳುಹಿಸಿಕೊಡಿ. ಈಗ ಮಾನ್ಯ ಬೆಲ್ಲದ್‌ರವರೆ ತಮ್ಮ ಪ್ರಶ್ನೆಯನ್ನು ಕೇಳಿ ಇಲ್ಲಿಗೆ ಆ ವಿಚಾರ ಮುಕ್ತಾಯವಾಯಿತು. ಇನ್ನು ನೀವು ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಧಾರವಾಡದಲ್ಲಿರುವ ಕೆ. ಎಂ. ಎಫ್ ಅವರಿಂದ ವಾಯುಮಾಲಿನ್ಯ

೧೬೪೬. ಶ್ರೀ ಚಂದ್ರಕಾಂತ್ ಬೆಲ್ಲದ(ಧಾರವಾಡ ನಗರ).—ಮಾನ್ಯ ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್‌ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಕೆ. ಎಂ. ಎಫ್. ನ ಹಾಲಿನ ಸಂಸ್ಕರಣಾ ಕೇಂದ್ರದ ಸುತ್ತಲಿನ ಪ್ರದೇಶದಲ್ಲಿ ವಾಯು ಮಾಲಿನ್ಯದಿಂದ ದುರ್ವಾಸನೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ, ಹಾಗಿದ್ದಲ್ಲಿ, ಮಾಲಿನ್ಯ ತಡೆಗಟ್ಟಲು ಸರ್ಕಾರದವರಿಂದ ಕೈಗೊಂಡ ಕ್ರಮಗಳೇನು ?

ಆ) ಧಾರವಾಡದ ಕೆ. ಎಂ. ಎಫ್. ಹಾಲಿನ ಸಂಸ್ಕರಣ ಕೇಂದ್ರ ಪ್ರಾರಂಭವಾದ ವರ್ಷದಿಂದ ಈವರೆಗಿನ ಅದರ ಉತ್ಪಾದನೆಯ ಪ್ರತ್ಯೇಕವಾದ ವಿವರಣೆ ಕೊಡುವುದು. ಅದರ ಗರಿಷ್ಠ ಮಟ್ಟದ ಉತ್ಪಾದನೆಯ ಪ್ರಮಾಣವೆಷ್ಟು ಹಾಗೂ ಅದರ ಉತ್ಪಾದನೆ ಹೆಚ್ಚಿಸಲು ಯಾವ ಕ್ರಮ ತೆಗೆದು ಕೊಳ್ಳಲಾಗುವುದು ;

ಇ) ಈ ಘಟಕಕ್ಕೆ ಪ್ರತಿವರ್ಷದಲ್ಲಿ ಪೂರೈಕೆಯಾಗುತ್ತಿರುವ ಹಾಲಿನ ಪ್ರಮಾಣದ ಜಿಲ್ಲಾವಾರು ಪ್ರತ್ಯೇಕ ವಿವರ ಕೊಡುವುದು ;

ಈ) ಧಾರವಾಡ ಜಿಲ್ಲೆಯಲ್ಲಿಪ್ರತಿ ವರ್ಷ ಪ್ರಾರಂಭಿಸಿದ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಸಂಖ್ಯೆ ಎಷ್ಟು :